

# ಜೋರು ಬಾಯಿಗೆ ಹೆಣ್ಣು ಒಲಿವಳಯ್ಯ...

ಗೂಳಿ ಕಪ್ಪೆಗಳು ತಮ್ಮ ಕತ್ತಿನ ಎರಡೂ ಬದಿಯನ್ನು ಉಬ್ಬಿಸಿಕೊಂಡು, ಜೋರಾಗಿ ಕೂಗುತ್ತವೆ. ಹೆಣ್ಣಿನ ಪಾಲಿಗೆ ಆ ಕರೆಯೇ ಮಿಲನಕ್ಕೆ ಆಹ್ವಾನಪತ್ರಿಕೆ.

■ **ಶಶಿಧರಸ್ವಾಮಿ ಆರ್. ಹಿರೇಮಠ**

ಹಳ್ಳದಂಚಿನ ಹಾದಿ ಹಿಡಿದು ನಡೆದುಕೊಂಡು ಸಾಗುತ್ತಿದ್ದೆ. ಹಿಂದಿನ ದಿನ ರಾತ್ರಿ ಜೋರಾಗಿ ಮಳೆ ಸುರಿದು, ಮಣ್ಣಿನ ಪರಿಮಳ ಮೂಗಿಗೆ ರಾಚುತ್ತಿತ್ತು. ಮೂಗು ಮಣ್ಣಿನ ಪರಿಮಳ ಹೀರುತ್ತಿರುವಾಗ, ಕಿವಿಗಳಿಗೆ ಕಪ್ಪೆಗಳ ಕೂಗಾಟ ಕೇಳಿಸಿತು. ಅವುಗಳ ವಟಗುಡುವಿಕೆಯಲ್ಲಿ ಏನೋ ಮಾರ್ಮಿಕ ಹಾಗೂ ಮೋಹಕತೆ ಇರುವಂತೆ ತೋರಿತು. ಟರ್‌ರ್ರ್... ಗ್ರೂಕ್... ಗ್ರೂಕ್... ಎಂದು ಹತ್ತಾರು ಕಪ್ಪೆಗಳ ಕೂಗು ಒಟ್ಟಿಗೆ ತೇಲಿ ಬಂದ ದಿಕ್ಕಿನತ್ತ ಹೆಜ್ಜೆ ಹಾಕಿದೆ.

ಅದು ಹಳ್ಳದಂಚಿನಲ್ಲಿರುವ ಕಲ್ಲಜ್ಜನರ ಮುಕಣ್ಣನವರ ಹೊಲ. ಜಮೀನಿನಲ್ಲಿನ ಆಳವಾದ ಇಂಗುಗುಂಡಿಯಲ್ಲಿ ಕೆಂಗಲಾದ ಮಳೆನೀರು ನಿಂತಿದೆ. ಆ ನೀರಿನಲ್ಲಿ ಕೆಲವು ಗಾಢ ಹಳದಿ ವರ್ಣದ ಕಪ್ಪೆಗಳು ಈಜುತ್ತಿದ್ದವು. ಇನ್ನೂ ಕೆಲವು ದಂಡೆಯ ಮೇಲೆ ಕುಳಿತು ನೀಲ ವರ್ಣದ ಬಲೂನ್‌ನಂತೆ ಗಂಟಲು ಊದಿಸಿಕೊಂಡು ಕೂಗುತ್ತಿದ್ದವು. ಇನ್ನೂ ಹಲವು ಮಾಸಲು ಹಸಿರು ಬಣ್ಣದ ಕಪ್ಪೆಯ ಬೆನ್ನೇರಿ ಈಜುತ್ತಿದ್ದವು, ಹಲವು ಕುಪ್ಪಳಿಸುತ್ತಿದ್ದವು. ಮಧ್ಯ ಮಧ್ಯದಲ್ಲಿ ಕ್ರೋಕ್... ಕ್ರೋಕ್... ಎಂಬ ಸಮೂಹಗಾನ.

ಅಲ್ಲಿ ಅಚ್ಚ ಹಳದಿ ದಿರಸಿನ ಒಂದು ಪಂಗಡ ಮತ್ತು ಇನ್ನೊಂದು ಮಾಸಲು ಹಸಿರು ದಿರಸಿನ ಮತ್ತೊಂದು ಗುಂಪು ಗಮನಸೆಳೆದವು. ಸುಮಾರು 25ರಿಂದ 30 ಕಪ್ಪೆಗಳ ಸಮೂಹವೇ ನೆರೆದಿತ್ತು. ಕ್ಯಾಮೆರಾಕ್ಕೆ ಜೂಮ್ ಲೆನ್ಸ್ ಅಳವಡಿಸಿಕೊಂಡು ಫೋಟೊಗ್ರಫಿ ಆರಂಭಿಸಿದೆ.

ಅಚ್ಚ ಹಳದಿ ಬಣ್ಣದ ಗಂಡು ಕಪ್ಪೆಗಳು ಮಾಸಲು ಹಸಿರು ಬಣ್ಣದ ಹೆಣ್ಣನ್ನು ಮಿಲನಕೂಟಕ್ಕೆ ಸೆಳೆಯುವಾಗ, ಅದರ ಕತ್ತಿನ ಅಕ್ಕಪಕ್ಕದಲ್ಲಿ ಗಾಢ ನೀಲಿ ಬಣ್ಣದ ಗುಳ್ಳೆಯಂತಹ ಆಕೃತಿ ರೂಪುಗೊಳ್ಳುತ್ತದೆ.